ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

21

ಇಲಾಖೆ / ವಿಷಯ : DEPARTMENT / SUBJECT: ಕೃಷಿ ಕಾಯ್ದೆ

ಪತ್ರಿಕೆಯ ಹೆಸರು : NAME OF THE NEWS PAPER: [illegible]    ದಿನಾಂಕ : DATE 7/2/2021

# 3 ರಾಜ್ಯದಲ್ಲಿ ರಸ್ತೆ ತಡೆ ತೀವ್ರ

## ಪಂಜಾಬ್, ಹರ್ಯಾಣ, ರಾಜಸ್ಥಾನದಲ್ಲಿ ಹೆದ್ದಾರಿ ಬಂದ್ । ಉಳಿದೆಡೆ ನೀರಸ ಶಾಂತ ಪ್ರತಿಭಟನೆ, ಹಿಂಸಾಚಾರ ಇಲ್ಲ । 3 ಗಂಟೆ ರಸ್ತೆ ತಡೆದು ಹೋರಾಟ



**ನವದೆಹಲಿ:** ಕೇಂದ್ರ ಸರ್ಕಾರ ಜಾರಿಗೆ ತಂದಿರುವ 3 ಕೃಷಿ ಕಾಯ್ದೆ ವಿರೋಧಿಸಿ ಶನಿವಾರ ರೈತ ಸಂಘಟನೆಗಳು ದೇಶಾದ್ಯಂತ ಹಮ್ಮಿಕೊಂಡಿದ್ದ ರಸ್ತೆ ತಡೆ (ಚಕ್ಕಾ ಜಾಮ್) ಚಳವಳಿಗೆ 3 ರಾಜ್ಯ ಹೊರತುಪಡಿಸಿದರೆ ಮಿಕ್ಕ ರಾಜ್ಯಗಳಲ್ಲಿ ಸಾಂಕೇತಿಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪಂಜಾಬ್, ಹರ್ಯಾಣ, ರಾಜಸ್ಥಾನದಲ್ಲಿ ಚಳವಳಿ ಯಶಸ್ವಿಯಾಗಿದ್ದು, ಶಾಂತಿಯುತವಾಗಿ ಸಂಪನ್ನಗೊಂಡಿದೆ.

ಕೃಷಿ ಕಾಯ್ದೆಗಳ ವಿರುದ್ಧ 'ಸಂಯುಕ್ತ ಕಿಸಾನ್ ಮೋರ್ಚಾ' ಅಡಿಯಲ್ಲಿ ಬರುವ 30ಕ್ಕೂ ಹೆಚ್ಚು ರೈತ ಸಂಘಟನೆಗಳು, ಶನಿವಾರ ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ಉತ್ತರಪ್ರದೇಶ, ಉತ್ತರಾಖಂಡ ಹಾಗೂ ದಿಲ್ಲಿ ನಗರ ಹೊರತುಪಡಿಸಿ ಉಳಿದ ರಾಜ್ಯಗಳ ಪ್ರಮುಖ ಹೆದ್ದಾರಿಗಳು ಹಾಗೂ ಇತರ ರಸ್ತೆಗಳ ಬಂದ್‌ಗೆ ಕರೆ ನೀಡಿದ್ದವು. ಈ ಹಿನ್ನೆಲೆಯಲ್ಲಿ ಪ್ರತಿಭಟನೆಯ ಕೇಂದ್ರ ಸ್ಥಾನವಾದ ದಿಲ್ಲಿ ಗಡಿಗಳಾದ ಸಿಂಘು, ಟಿಕ್ರಿ ಹಾಗೂ ಗಾಜಿಪುರದಲ್ಲಿ ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ರೈತರು ಕಾಯ್ದೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿದರು.

**ಹೊಸ ಪ್ರಸ್ತಾವ ಬಂದರೆ ಚರ್ಚೆಗೆ ಸಿದ್ಧ**

**ಇಂದಿನ ಹೋರಾಟ ಯಶಸ್ವಿಯಾಗಿದೆ. ಇದು ರೈತರ ಒಗ್ಗಟ್ಟಿನ ದ್ಯೋತಕ. ಸರ್ಕಾರದ ಜತೆ ಮಾತುಕತೆಗೆ ಈಗಲೂ ನಾವು ಸಿದ್ಧ. ಆದರೆ ಸರ್ಕಾರ ಹೊಸ ಪ್ರಸ್ತಾವದೊಂದಿಗೆ ಮಾತುಕತೆಗೆ ಬರಬೇಕು. ಕೃಷಿ ಕಾಯ್ದೆಗಳು ರದ್ದಾಗಬೇಕು ಎಂಬುದೇ ನಮ್ಮ ಬೇಡಿಕೆ.**

• **ದರ್ಶನ್ ಪಾಲ್**, ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡ

ದಿಲ್ಲಿಯಲ್ಲಿ ಜ.26ರಂದು ನಡೆದ ಹಿಂಸಾತ್ಮಕ ಘಟನೆಗಳು ಪುನರಾವರ್ತನೆ ಆಗಬಾರದು ಎಂದು 50 ಸಾವಿರ ಪೊಲೀಸರು ಭದ್ರತೆಗೆ ಇಳಿದಿದ್ದರು. ವದಂತಿ ಹರಡುವಿಕೆ ತಡೆಗೆ ಶನಿವಾರ ರಾತ್ರಿಯವರೆಗೆ ಗಡಿ ಪ್ರದೇಶದಗಳಲ್ಲಿ ಮೊಬೈಲ್ ಇಂಟರ್ನೆಟ್ ಸೇವೆ ಸ್ಥಗಿತಗೊಳಿಸಲಾಗಿತ್ತು. 10 ಮೆಟ್ರೋ ನಿಲ್ದಾಣಗಳನ್ನು ಮುಂಜಾಗ್ರತಾ ಕ್ರಮವಾಗಿ ಮುಚ್ಚಲಾಗಿತ್ತು.

**3 ರಾಜ್ಯಗಳಲ್ಲಿ ಯಶಸ್ವಿ:** ಪಂಜಾಬ್ ಹಾಗೂ ಹರ್ಯಾಣದ ಚಂಡೀಗಢ-ರೆಖ್ಯ ರಾಕ್‌ಪುರ, ಅಮೃತಸರ-ಪಠಾಣ್‌ಕೋಟ್, ಭಠಿಂಡಾ-ಚಂಡೀಗಢ, ಲೂಧಿಯಾನಾ- ಜಲಂಧರ್ ಸೇರಿದಂತೆ ಹಲವು ಹೆದ್ದಾರಿಗಳನ್ನು ರೈತರು, ಟ್ರಾಕ್ಟರ್‌ಗಳನ್ನು ಅಡ್ಡಲಾಗಿ ನಿಲ್ಲಿಸಿ ಬಂದ್ ಮಾಡಿದರು. ರಾಜಸ್ಥಾನದ ಗಂಗಾನಗರ, ಹನುಮಾನ್‌ಗಢ, ಧೋಲ್‌ಪುರ, ಝಾಲಾವರ್‌ನಲ್ಲಿ ಹೆದ್ದಾರಿಗಳನ್ನು ರೈತರು ಬಂದ್ ಮಾಡಿದ ಕಾರಣ ಪ್ರತಿಭಟನೆ ಬಹುತೇಕ ಯಶಸ್ವಿಯಾಯಿತು. ಹಲವೆಡೆ ತಾವೇಕೆ ಹೋರಾಟ ಮಾಡುತ್ತಿದ್ದೇವೆ ಎಂಬುದರ ಮನವರಿಕೆ ಮಾಡಲು ಯತ್ನಿಸಿದರು. ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಅಲ್ಲಲ್ಲಿ ಹೆದ್ದಾರಿ ತಡೆ ನಡೆದಿದೆ.

**ಕಾಂಗ್ರೆಸ್ ಸಹಕಾರ:** ದೇಶದ ಅನೇಕ ಕಡೆಗಳಲ್ಲಿ ಕಾಂಗ್ರೆಸ್ ಹಾಗೂ ಇತರ ಹಲವು ಪ್ರತಿಪಕ್ಷಗಳ ಕಾರ್ಯಕರ್ತರು 'ಚಕ್ಕಾ ಜಾಮ್'ಗೆ ಸಾಥ್ ನೀಡಿದರು. 'ಮಾರಕವಾದ ಕೃಷಿ ಕಾಯ್ದೆಗಳ ವಿರುದ್ಧ ಇದು ಅನ್ನದಾತನ ಶಾಂತಿಯುತ

# ಕೇಂದ್ರಕ್ಕೆ ಅ.2ರ ಗಡುವು



ಇನ್ನೂ 8 ತಿಂಗಳು ದೆಹಲಿ ಗಡಿಯಲ್ಲೇ ಹೋರಾಟ

ಬೇಡಿಕೆ ಈಡೇರದಿದ್ರೆ ಹೊಸದಾಗಿ ಹೋರಾಟ ಶುರು

ರೈತ ನಾಯಕ ರಾಕೇಶ್ ಟಿಕಾಯತ್ ಘೋಷಣೆ

**ಗಾಜಿಯಾಬಾದ್:** ಕೇಂದ್ರ ಸರ್ಕಾರ ಅಂಗೀಕರಿಸಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಲೇಬೇಕು ಎಂಬ ಹಠಕ್ಕೆ ಅಂಟಿಕೊಂಡಿರುವ ರೈತ ಸಂಘಟನೆಗಳು, ಬೇಡಿಕೆ ಈಡೇರಿಸಲು ಕೇಂದ್ರ ಸರ್ಕಾರಕ್ಕೆ ಗಾಂಧೀ ಜಯಂತಿ ದಿನವಾದ ಅ.2ರ ಗಡುವು ನೀಡಿವೆ.

ಈ ಕುರಿತು ಶನಿವಾರ ಇಲ್ಲಿ ಹೇಳಿಕೆ ನೀಡಿರುವ ಭಾರತೀಯ ಕಿಸಾನ್ ಮೋರ್ಚಾ ನಾಯಕ ರಾಕೇಶ್ ಟಿಕಾಯತ್ 'ನಮ್ಮ ಬೇಡಿಕೆ ಈಡೇರುವವರೆಗೂ ನಾವು ಹಿಂದಿರುಗುವುದಿಲ್ಲ. ನಾವು ಸರ್ಕಾರಕ್ಕೆ ಅ.2ರ ಗಡುವು ನೀಡುತ್ತಿದ್ದೇವೆ. ಅಷ್ಟರೊಳಗೆ ಬೇಡಿಕೆ ಈಡೇರದೇ ಇದ್ದಲ್ಲಿ, ಆಗ ಮತ್ತೆ ಹೋರಾಟದ ರೂಪುರೇಷೆ ನಿರ್ಧರಿಸಲಿದ್ದೇವೆ. ಯಾವುದೇ ಕಾರಣಕ್ಕೂ ಒತ್ತಡಕ್ಕೆ ಒಳಗಾಗಿ ಸರ್ಕಾರದ ಜೊತೆ ಮಾತುಕತೆ ನಡೆಸುವುದಿಲ್ಲ' ಎಂದು ಘೋಷಿಸಿದ್ದಾರೆ

ಇದೇ ವೇಳೆ 'ರೈತರು ಶನಿವಾರ ಕರೆಕೊಟ್ಟಿದ್ದ 'ಚಕ್ಕಾ ಜಾಮ್' ಶಾಂತಿಯುತ ಪ್ರತಿಭಟನೆಯನ್ನು ಹಾಳುಗೆಡವಲು ಕೆಲ ಕಿಡಿಗೇಡಿಗಳು ಯೋಜನೆ ರೂಪಿಸಿದ್ದ ಮಾಹಿತಿ ತಿಳಿದುಬಂದ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಪ್ರತಿಭಟನೆಯನ್ನು ವಾಪಸ್ ಪಡೆದಿದ್ದೇವೆ' ಎಂದು ತಿಳಿಸಿದರು. ಇದೇ ವೇಳೆ ರೈತರ ಭೂಮಿಯನ್ನು ಯಾರೂ ಮುಟ್ಟಲು ಸಾಧ್ಯವಿಲ್ಲ. ಅದನ್ನು ರೈತರೇ ಕಾಪಾಡಿಕೊಳ್ಳುತ್ತಾರೆ ಎಂದು ಗುಡುಗಿದರು.